## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/1099, 927 & 1101/2022/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 06.01.2023.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: 1 ಮತ್ತು 2ನೇ ಎದುರುದಾರರು ಸರ್ಕಾರಕ್ಕೆ ಉಂಟು ಮಾಡಿರುವ ನಷ್ಟವನ್ನು ಮರುಭರಣ ಮಾಡಿಕೊಳ್ಳುವ ಕುರಿತು ಶಿಫಾರಸ್ಸು ವರದಿ.

*****

1. ಶ್ರೀ. ಕುಮಾರ್ ಎಂ. ತಂದೆ ಲೇಟ್ ಮಾದಯ್ಯ, ಕೊತ್ತನೂರು ಗ್ರಾಮ, ಕೊಳ್ಳೆಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನೂ ಮುಂದೆ ದೂರುದಾರರೆಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಎಂ.ಕೆ.ನಾಗರಾಜು, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಾಮರಾಜನಗರ ಜಿಲ್ಲೆ ಹಾಗೂ 2) ಶ್ರೀ.ಆರ್.ಕೆ.ಮಹಾದೇವಸ್ವಾಮಿ, ಹಿಂದಿನ ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಾಮರಾಜನಗರ ಜಿಲ್ಲೆ (2ನೇ ಎದುರುದಾರರನ್ನು ತನಿಖಾ ಕಾಲಕ್ಕೆ ಸೇರ್ಪಡೆಗೊಳಿಸಲಾಗಿದೆ) (ಇನ್ನೂ ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ 2017-18ನೇ ಸಾಲಿನ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯ ಅನುದಾನದ ಹಣವನ್ನು ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು, ಪಾಳ್ಯ ಹೋಬಳಿ, ಕೊತ್ತನೂರು ಗ್ರಾಮ ನಿವಾಸಿಯಾದ ಎಂ.ರವಿ ಬಿನ್ ಮಲ್ಲಯ್ಯ ಎಂಬ ಅನರ್ಹ ಫಲಾನುಭವಿಗೆ 3 ಲಕ್ಷ ರೂಪಾಯಿಗಳನ್ನು ಸಹಾಯಧನದ ರೂಪದಲ್ಲಿ ಮಂಜೂರು ಮಾಡಿದ್ದು, ಈ ಬಗ್ಗೆ ನಾನು ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ದಿ:17/11/2021 ರಂದು ದೂರು ಸಲ್ಲಿಸಿ ಅನರ್ಹ ಫಲಾನುಭಿಗೆ ನೀಡಿರುವ ಹಣವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡುವಂತೆ ಮನವಿ ಮಾಡಿಕೊಂಡಿರುತ್ತಾರೆ.

3. ಸಹಾಯಧನ ಪಡೆದಿರುವ ಎಂ.ರವಿ ಎಂಬುವವರು ದ್ವಿತೀಯ ದರ್ಜೆ ಗುತ್ತಿಗೆದಾರರಾಗಿದ್ದು ಹಾಗೂ ಸಹಾಯಧನ ಪಡೆಯುವ ಸಂದರ್ಭದಲ್ಲಿ ಚಿಕ್ಕಲ್ಲೂರು ಗ್ರಾಮ ಪಂಚಾಯಿತಿ ಸದಸ್ಯರು ಕೂಡಾ ಆಗಿದ್ದು, ಈ ವ್ಯಕ್ತಿಯು ಜೆ.ಸಿ.ಬಿ ಟಾರ್ ಮಿಕ್ಸಿಂಗ್ ಪ್ಲಾಂಟೇಷನ್, ರೋಡ್ ರೋಲರ್, ಟ್ರಾಕ್ಟರ್ ಮತ್ತು ನೀರಿನ ಟ್ಯಾಂಕರ್ ನೀರಾವರಿ ಕೃಷಿ ಜಮೀನು ಮತ್ತು ಕೊಳ್ಳೆಗಾಲ ನಗರದಲ್ಲಿ ಎರಡು ಅಂತಸ್ತಿನ ಮನೆ ಮತ್ತು ಸ್ವಗ್ರಾಮವಾದ ಕೊತ್ತನೂರಿನಲ್ಲಿ 2 ಆರ್.ಸಿ.ಸಿ ಮನೆಯನ್ನು ಹೊಂದಿ ಆರ್ಥಿಕವಾಗಿ ಸದೃಢರಾಗಿರುತ್ತಾರೆ. ಸದರಿ ವ್ಯಕ್ತಿಗೆ ನಿಗಮದ ಅಧಿಕಾರಿಗಳು ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ 3 ಲಕ್ಷ ಸಹಾಯಧನವನ್ನು ನೀಡಿದ್ದು, ವ್ಯವಸ್ಥಾಪಕರಾದ ರಾಜು ರವರು ಹಣ ನೀಡುವಲ್ಲಿ ಸಹಕರಿಸಿದ್ದು, ಸದರಿಯವರು ಕರ್ತವ್ಯಲೋಪ ಎಸಗಿರುವುದರಿಂದ ಕ್ರಮ ಜರುಗಿಸಲು ಕೋರಿ ಹಾಗೂ ಉಂಟಾದ ನಷ್ಟವನ್ನು ಮರುಭರಣಾ ಮಾಡಿಕೊಳ್ಳಬೇಕೆಂದು ಸದರಿ ದೂರನ್ನು ಸಲ್ಲಿಸಿರುತ್ತಾರೆ.

4. **ಎದುರುದಾರರಿಂದ ದಿ:04/05/2022 ರಂದು ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ತಾನು ಈ ಹಿಂದೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಚಾಮರಾಜನಗರ ಜಿಲ್ಲಾ ಕಛೇರಿಯಲ್ಲಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿ ದಿ:31/08/2018 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ದಿ:07/11/2017 ರಿಂದ 15/08/2018 ರ ವರೆಗೆ ಕಛೇರಿಯ ಜಿಲ್ಲಾ ವ್ಯವಸ್ಥಾಪಕ ಹುದ್ದೆಯ ಪ್ರಭಾರದಲ್ಲಿರುತ್ತೇನೆ. 2017-18ನೇ ಸಾಲಿನಲ್ಲಿ ನಿಗಮದ ಯೋಜನೆಯಲ್ಲಿ ಒಂದಾದ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶಿಫ್ಟ್ ಡಿಸೈಯರ್ ವಾಹನಕ್ಕೆ ಸೌಲಭ್ಯ/ಸಹಾಯಧನ ನೀಡುವಂತೆ ಕೋರಿ ಕೊಳ್ಳೇಗಾಲ ತಾಲ್ಲೂಕಿನ ಕೊತ್ತನೂರು ಗ್ರಾಮದ ನಿವಾಸಿ ರವಿ.ಎಂ. ಇವರು ಅರ್ಜಿ ಸಲ್ಲಿಸಿದ್ದು, ತಮ್ಮ ಅರ್ಜಿಯೊಂದಿಗೆ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಕುಟುಂಬಸ್ಥರ ಪಡಿತರ ಚೀಟಿ, ಚುನಾವಣಾ ಆಯೋಗದ ಗುರುತಿನ ಚೀಟಿಯ ಪ್ರತಿ, ಆಧಾರ ಕಾರ್ಡ್‌ನ ಪ್ರತಿ ಹಾಗೂ ವಾಹನ ಚಾಲನಾ ಪರವಾನಿಗೆ ಇತ್ಯಾದಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿ ಸಹಾಯಧನಕ್ಕೆ ಪರಿಗಣಿಸಲಾಗಿರುತ್ತದೆ.

5. ಉದ್ಯಮಶೀಲತಾ ಯೋಜನೆ ಅಡಿಯಲ್ಲಿ ಫಲಾನುಭವಿಗಳ ಆಯ್ಕೆ ಸಮಿತಿಯು ಆಯ್ಕೆ ಮಾಡಿರುವುದರಿಂದ ತನ್ನ ಅವಧಿಯಲ್ಲಿ ಸಹಾಯಧನ ಮಂಜೂರು ಮಾಡಿರುವುದಿಲ್ಲ. ಶಾಸಕರ ನೇತೃತ್ವದ ಸಮಿತಿಯು 5 ಜನರನ್ನು ಉದ್ಯಮಶೀಲತಾ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸೌಲಭ್ಯ ನೀಡುವಂತೆ ತೀರ್ಮಾನಿಸಿರುತ್ತದೆ. ಆದ್ದರಿಂದ ಜಿಲ್ಲಾ ವ್ಯವಸ್ಥಾಪಕರು

ಅನುಸರಣಾ ಕ್ರಮ ಕೈಗೊಂಡು ರವಿ.ಎಂ. ಇವರಿಗೆ ಉದ್ಯಮಶೀಲತಾ ಯೋಜನೆ ಅಡಿಯಲ್ಲಿ ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

6. ಫಲಾನುಭವಿಯಾದ ರವಿ.ಎಂ. ಇವರು ಯೋಜನೆಯ ದುರ್ಲಾಭ ಪಡೆದಿರುವ ಬಗ್ಗೆ ದೂರುದಾರರು ಸಲ್ಲಿಸಿರುವ ದೂರಿನ ಅನ್ವಯ ಜಿಲ್ಲಾ ವ್ಯವಸ್ಥಾಪಕ ಕಛೇರಿಯಿಂದ ರವಿ.ಎಂ. ವಿರುದ್ಧ ಕಾನೂನುಕ್ರಮಗಳನ್ನು ಮತ್ತು ಸಹಾಯಧನ ವಸೂಲಾತಿ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿದುಬಂದಿರುತ್ತದೆ. ತಾನು ಸರ್ಕಾರದ ಹಾಗೂ ನಿಗಮದ ಮಾರ್ಗಸೂಚಿ ಅನ್ವಯ ಕರ್ತವ್ಯ ನಿರ್ವಹಿಸಿದ್ದು, ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟವುಂಟು ಮಾಡಿರುವುದಿಲ್ಲ. ಸದುದ್ದೇಶದಿಂದ ಮಾಡಿದ ಕಾರ್ಯವಾಗಿರುತ್ತದೆ ಎಂಬಂತೆ ನಮೂದಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

7. **ದಿ:04-07-2022 ರ ಪತ್ರವನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ವ್ಯವಸ್ಥಾಪಕರು, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಾಮರಾಜನಗರ ಜಿಲ್ಲೆ ರವರಿಂದ ಪತ್ರ ಸ್ವೀಕರಿಸಿದ್ದು,** ತಮ್ಮ ಪತ್ರದಲ್ಲಿ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2017-18 ನೇ ಸಾಲಿನಲ್ಲಿ ಉದ್ಯಮಶೀಲತ ಅಭಿವೃದ್ಧಿ ಯೋಜನೆಯಡಿ ಅಂದಿನ ಜಿಲ್ಲಾ ವ್ಯವಸ್ಥಾಪಕರು ಎನ್.ರವಿ ಎಂಬುವವರಿಗೆ ರೂ.3ಲಕ್ಷ ಸಹಾಯಧನ ಮಂಜೂರು ಮಾಡಿದ್ದು, ಈ ಕುರಿತು ಸದರಿ ದಿನಾಂಕದಂದು ಕಾರ್ಯನಿರ್ವಹಿಸಿದ ಅಧಿಕಾರಿಯವರ ಹೆಸರನ್ನು ಈಗಾಗಲೇ ಸಲ್ಲಿಸಲಾಗಿರುತ್ತದೆ.

8. ದಿ:06-11-2020 ರಂದು ವ್ಯವಸ್ಥಾಪಕರ ಜ್ಞಾಪನ ಪತ್ರದನ್ವಯ ಕ್ರಮಕೈಗೊಳ್ಳಲು ಸೂಚಿಸಲಾಗಿದ್ದು, ಅದರಂತೆ ಎನ್.ರವಿ ಇವರಿಗೆ ನಿಗಮದ ವತಿಯಿಂದ ನೋಟಿಸ್ಸನ್ನು ಜಾರಿ ಮಾಡಿ ಪಡೆದುಕೊಂಡಿರುವ ಅನುದಾನವನ್ನು ನಿಗಮಕ್ಕೆ ಹಿಂತಿರುಗಿಸುವಂತೆ ಸೂಚಿಸಲಾಗಿರುತ್ತರೆ. ಫಲಾನುಭವಿಯು ಇಲ್ಲಿಯವರೆಗೆ ನಿಗಮಕ್ಕೆ ಹಣ ಹಿಂತಿರುಗಿಸದೆ ಹೋಗಿದ್ದರಿಂದ ನಿಗಮದಿಂದ ವಕೀಲರನ್ನು ನೇಮಿಸಿ ಪ್ರಕರಣ ದಾಖಲಿಸಲು ಸೂಚಿಸಲಾಗಿದ್ದು, ಎಲ್ಲ ದಾಖಲೆಗಳನ್ನು ವಕೀಲರಿಗೆ ಸಲ್ಲಿಸಲಾಗಿದೆ. ನಿಗಮ ವಕೀಲರು ಪ್ರಕರಣ ದಾಖಲಿಸಲು ಕ್ರಮ ಜರುಗಿಸಿರುತ್ತಾರೆ.

9. ಶ್ರೀ.ಎನ್. ರವಿ ಇವರಿಗೆ ನಿಗಮದ ನಿಯಮಾವಳಿಗಳನ್ನು ಉಲ್ಲಂಘಿಸಿ ಸಹಾಯಧನ ನೀಡಲು ತಾನು ಯಾವುದೇ ರೀತಿಯ ಶಿಫಾರಸ್ಸನ್ನು ಮಾಡಿರುವುದಿಲ್ಲ. ತಾನು ದಿ:10-07-2020 ರಂದು ನಿಗಮಕ್ಕೆ ಜಿಲ್ಲಾ ವ್ಯವಸ್ಥಾಪಕನಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಆಗಿನ ಜಿಲ್ಲಾ ವ್ಯವಸ್ಥಾಪಕರುಗಳು ಕರ್ತವ್ಯ ಲೋಪ ಎಸಗಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಫಲಾನುಭವಿಯ ವಿರುದ್ಧ ಕಾನೂನು ರೀತಿ ಕ್ರಮ ಜರುಗಿಸಲು ಸೂಚಿಸುವ ಹಿನ್ನಲೆಯಲ್ಲಿ ಪ್ರಕರಣವನ್ನು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ವಕೀಲರನ್ನು ಈಗಾಗಲೇ ನೇಮಿಸಲಾಗಿರುತ್ತದೆ. ಆದ್ದರಿಂದ ಹಣ ವಸೂಲಾತಿಗಾಗಿ ಸಿವಿಲ್ ಪ್ರಕರಣವನ್ನು ಮಾನ್ಯ ನ್ಯಾಯಾಲಯದಲ್ಲಿ ದಾಖಲಿಸಿ ಬಡತನ ರೇಖೆಗಿಂತ ಹೆಚ್ಚು ಆದಾಯ ಹೊಂದಿರುವ ಫಲಾನುಭವಿಯನ್ನು ಕಂದಾಯ ಇಲಾಖೆಯ ತಹಸೀಲ್ದಾರರು ವಾರ್ಷಿಕ ಆದಾಯ ರೂ.11 ಸಾವಿರ ರೂಪಾಯಿಗಳನ್ನು ಪ್ರಮಾಣ ಪತ್ರವನ್ನು ನೀಡಿರುವುದು ಅತ್ಯಂತ

ದುರಂತ ಆಗಿರುವುದರಿಂದ ನಿಗಮದ ವಕೀಲರು ನ್ಯಾಯಾಲಯದ ಮುಂದೆ ಕಾನೂನು ರೀತ್ಯ ತಹಸೀಲ್ದಾರ ಕಛೇರಿಯ ಸಿಬ್ಬಂದಿಯ ನಿರ್ಲಕ್ಷಕ್ಕೂ ಸಹ ಸಂಬಂಧಪಟ್ಟ ಸಿಬ್ಬಂದಿಯ ವಿರುದ್ಧ ಮೊಕದ್ದಮೆ ದಾಖಲಿಸುವುದಕ್ಕಾಗಿ ಸಲ್ಲಿಸಲಾಗಿರುತ್ತದೆ. ಆದ್ದರಿಂದ, ಸದರಿ ಅಂಶವನ್ನು ಪರಿಗಣಿಸಿ ತನ್ನನ್ನು ಪ್ರಕರಣದಿಂದ ಮುಕ್ತಗೊಳಿಸಲು ಕೋರಿರುತ್ತಾರೆ.

10. ಪ್ರಕರಣದಲ್ಲಿ ಈಗಾಗಲೇ ಅಂದಿನ ಜಿಲ್ಲಾ ವ್ಯವಸ್ಥಾಪಕರಾದ ಎನ್.ಕೆ. ನಾಗರಾಜ ರವರು ಫಲಾನುಭವಿಗೆ ಅನುದಾನವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದು ಅದರನ್ವಯ ಫಲಾನುಭವಿ ರೂ.3-ಲಕ್ಷ ಗಳನ್ನು ಪಡೆದುಕೊಂಡಿದ್ದು, ದೂರುದಾರರು ದೂರು ಸಲ್ಲಿಸಿದ ನಂತರ ಪ್ರಕರಣದಲ್ಲಿ ಪರಿಶೀಲಿಸಲಾಗಿದ್ದು ಎದುರುದಾರರು ಫಲಾನುಭವಿಯೆಂದು ಪರಿಗಣಿಸುವ ಪೂರ್ವದಲ್ಲಿ ನಿಗಮದ ನಿಯಮಗಳನ್ನು ಉಲ್ಲಂಘಿಸಿ ಶಿಫಾರಸ್ಸು ಮಾಡಿರುವುದು ದೃಢಪಡುತ್ತದೆ.

11. **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ವ್ಯವಸ್ಥಾಪಕರು, ಡಾ|| ಬಿ.ಆರ್. ಅಂಬೇಡ್ಕರ್, ಅಭಿವೃದ್ಧಿ ನಿಗಮ ಚಾಮರಾಜನಗರ ರವರಿಂದ ದಿ:28-07-2022 ರ ಪತ್ರ ಸ್ವೀಕರಿಸಿದ್ದು,** ತಮ್ಮ ಪತ್ರದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಉದ್ಯಮ ಶೀಲತ ಅಭಿವೃದ್ಧಿ ಯೋಜನೆಯಡಿ 2017-18 ನೇ ಸಾಲಿನಲ್ಲಿ ಫಲಾನುಭವಿ ಎಂ.ರವಿ ರವರಿಗೆ 3-ಲಕ್ಷ ಧನ ಸಹಾಯ ಸರ್ಕಾರದಿಂದ ಮಂಜೂರು ಮಾಡಲು ಶ್ರೀ.ಎಂ.ಕೆ.ನಾಗರಾಜು, ಕ್ಷೇತ್ರಾಭಿವೃದ್ಧಿ ಡಾ|| ಬಿ.ಆರ್. ಅಂಬೇಡ್ಕರ್, ಅಭಿವೃದ್ಧಿ ನಿಗಮದ ಅಂದಿನ ಅಧಿಕಾರಿಗಳಾದ ಶ್ರೀ ಎಂ.ಕೆ. ನಾಗರಾಜು, ರವರು ಹಾಗೂ ಸಾಲ ಮಂಜೂರು ಮಾಡಿದ ಅಂದಿನ ಜಿಲ್ಲಾ ವ್ಯವಸ್ಥಾಪಕರು, ಶ್ರೀ ಆರ್.ಕೆ. ಮಹಾದೇವಸ್ವಾಮಿ

ಆಗಿರುತ್ತಾರೆ. ಆಗಿನ ಜಿಲ್ಲಾ ವ್ಯವಸ್ಥಾಪಕರು, ಕರ್ತವ್ಯ ಲೋಪ ಎಸಗಿದ್ದು ಇರುತ್ತದೆ. ಧನ ಸಹಾಯ ಪಡೆದ ಎಂ.ರವಿ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಮತ್ತು ಸಿವಿಲ್ ಮೊಕದ್ದಮೆಯನ್ನು ದಾಖಲಿಸಲು ಈ ಕುರಿತು ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಯು ನಿಗಮಕ್ಕೆ ಉಂಟು ಮಾಡಿರುವ ಆರ್ಥಿಕ ನಷ್ಟವನ್ನು ಬಡ್ಡಿ ಸಮೇತ ವಸೂಲಿ ಮಾಡಿ ನಿಗಮದ ಖಾತೆಗೆ ಜಮಾ ಮಾಡುವುದು ಹನೂರು ತಾಲ್ಲೂಕು ಅಭಿವೃದ್ಧಿ ಅಧಿಕಾರಿಯವರ ಕರ್ತವ್ಯವಾಗಿರುತ್ತದೆ. ದಿ:27-07-2022 ರಂದು ಫಲಾನುಭವಿಯ ಮನೆಗೆ ಭೇಟಿ ನೀಡಿ ಐ.ಎಸ್.ಬಿ.ಯೋಜನೆಯಡಿ ಪಡೆಯಲಾದ ಧನ ಸಹಾಯದ ಬಾಬ್ತು ರೂ.10,000/- ಗಳನ್ನು ನಿಗಮದ ಖಾತೆಗೆ ವಸೂಲಿ ಮಾಡಿ ಜಮಾ ಮಾಡಲಾಗಿರುತ್ತದೆ. ಫಲಾನುಭವಿಯು 6 ತಿಂಗಳಲ್ಲಿ ಪೂರ್ತಿ ಸಹಾಯಧನ ಮೊತ್ತವನ್ನು ಸಂದಾಯ ಮಾಡುವುದಾಗಿ ತಿಳಿಸಿರುತ್ತಾರೆ. ತಾನು ದಿ:31-07-2022 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುವುದಾಗಿ ನಮೂದಿಸಿ ಪತ್ರ ಸಲ್ಲಿಸಿರುತ್ತಾರೆ.

12. **2ನೇ ಎದುರುದಾರರಿಂದ ದಿ: 06/12/2022ರ ಆಕ್ಷೇಪಣೆ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ ಶ್ರೀ. ಎಂ ರವಿ ಬಿನ್ ಮಲ್ಲಯ್ಯ ಕೊತ್ತನೂರು ಗ್ರಾಮ, ಕೊಳ್ಳೇಗಾಲ ತಾಲ್ಲೂಕು ರವರಿಗೆ ನಿಗಮದ ಉದ್ಯಮಿ ಶೀಲತ ಅಭಿವೃದ್ಧಿ ಯೋಜನೆಯಡಿ ವಾಹನ ಸೌಲಭ್ಯ ಕಲ್ಪಿಸಿರುವ ಬಗ್ಗೆ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದಂತೆ ನಿಗಮದ ನಿಯಮಾವಳಿಗಳ ಅನ್ವಯ ವಿಧಾನಸಭಾ ಸದಸ್ಯರು ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿದ್ದು, ಆಯ್ಕೆ ಸಮಿತಿಗೆ ಅಧ್ಯಕ್ಷರಾಗಿರುತ್ತಾರೆ. ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವುದು ಜಿಲ್ಲಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ ಅದರನ್ವಯ ಸದರಿ

ಫಲಾನುಭವಿಯು ದಿ: 18/08/2018 ರಂದು ಫಲಾನುಭವಿಯಾಗಿ ಆಯ್ಕೆಯಾಗಿರುತ್ತಾರೆ.

13. ಉದ್ಯಮ ಶೀಲತ ಅಭಿವೃದ್ಧಿ ಯೋಜನೆಯು ಬ್ಯಾಂಕಿನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಯೋಜನೆಯಾಗಿದ್ದು, ಫಲಾನುಭವಿಯಿಂದ ಅಗತ್ಯ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಕುಟುಂಬ ದೃಢೀಕರಣ ಪತ್ರ, ಆಧಾರ ಕಾರ್ಡ್, ಚುನಾವಣಾ ಗುರುತಿನ ಚೀಟಿ ದಾಖಲೆಗಳನ್ನು ಪಡೆದುಕೊಂಡು ಫಲಾನುಭವಿಯು ಸೇವಾ ವ್ಯಾಪ್ತಿಗೆ ಬರುವ ಬ್ಯಾಂಕಿಗೆ ಅರ್ಜಿಯನ್ನು ಶಿಫಾರಸ್ಸು ಮಾಡಲಾಗಿರುತ್ತದೆ.

14. ಫಲಾನುಭವಿಯು ಡಾ|| ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ ಪರಿಶಿಷ್ಟ ಜಾತಿಯ ಫಲಾನುಭವಿಯಾಗಿದ್ದು, ತಹಶೀಲ್ದಾರರಿಂದ ದೃಢೀಕರಣ ಪತ್ರವನ್ನು ಸಲ್ಲಿಸಿರುತ್ತಾರೆ. ನಿಗಮ ನಿಗದಿಪಡಿಸಿರುವ ಆದಾಯ ಪ್ರಮಾಣ ಪತ್ರವನ್ನು ಸಹ ಸಲ್ಲಿಸಿರುವುದರಿಂದ ಸೌಲಭ್ಯ ನೀಡಿರುವುದು ಕ್ರಮಬದ್ಧವಾಗಿರುತ್ತದೆ ಎಂಬಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

15. ಈ ಮೇಲ್ಕಂಡ ಅಂಶಗಳಂದ 1ನೇ ಎದುರುದಾರರು ಶ್ರೀ. ಎಂ ರವಿ ಇವರು ಡಾ|| ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಫಲಾನುಭವಿಯೆಂದು ಆಯ್ಕೆಯಾಗಲು ತಪ್ಪು ಮಾಹಿತಿ ನೀಡಿದ್ದರಿಂದ ಸದರಿಯವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಗೂ ಹಣ ಹಿಂಪಡೆಯಲು ಸಿವಿಲ್ ಮೊಕದ್ದಮೆಯನ್ನು ದಾಖಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವ್ಯವಸ್ಥಾಪಕರು, ಡಾ|| ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಚಾಮರಾಜನಗರ ರವರು ದಿ:28/07/2022ರ ಪತ್ರದಲ್ಲಿ ತಿಳಿಸಿರುವುದರಿಂದ, ಫಲಾನುಭವಿಯು ಸಂಪೂರ್ಣ ಹಣವನ್ನು ನಿಗಮಕ್ಕೆ ಮರುಭರಣ ಮಾಡುವುದಾಗಿ ದಿ: 27/07/2022 ರಂದು ತಿಳಿಸಿರುವುದಾಗಿ ತಮ್ಮ ಪತ್ರದಲ್ಲಿ ಉಲ್ಲೇಖಿಸಿರುವುದರಿಂದ ಮೇಲ್ನೋಟಕ್ಕೆ ಶ್ರೀ. ಎಂ ರವಿ ಇವರು ನಿಗಮದಿಂದ ಸಹಾಯಧನ ಪಡೆಯಲು ಅನರ್ಹ ಫಲಾನುಭವಿಯೆಂದು ಕಂಡುಬಂದರೂ ಸಹಾ ನಿಗಮದಿಂದ ಸಹಾಯಧನ ಮಂಜೂರು ಮಾಡುವ ಪೂರ್ವದಲ್ಲಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಸಂಪೂರ್ಣ ಮಾಹಿತಿ ಪಡೆದುಕೊಂಡ ನಂತರ ಹಾಗೂ ಸ್ಥಳೀಯವಾಗಿ ಪರಿಶೀಲಿಸಿ ಮಂಜೂರಾತಿಗೆ ಶಿಫಾರಸ್ಸು ಮಾಡುವ ಹೊಣೆಗಾರಿಕೆ ಹೊಂದಿರುತ್ತಾರೆ. ಸದರಿ ಸಮಯದಲ್ಲಿ 1ನೇ ಎದುರುದಾರರು ಶಿಫಾರಸ್ಸು ಮಾಡುವ ಅಭಿವೃದ್ಧಿ ಅಧಿಕಾರಿಯಾಗಿದ್ದು, ತಮ್ಮ ಕರ್ತವ್ಯದ ಜೊತೆಗೆ ಜಿಲ್ಲಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುವುದರಿಂದ ಸರ್ಕಾರಕ್ಕೆ ನಷ್ಟ ಉಂಟಾಗಲು ಹಾಗೂ ಅನರ್ಹ ಫಲಾನುಭವಿಯನ್ನು ಆಯ್ಕೆ ಮಾಡಲು 1 ಮತ್ತು 2ನೇ ಎದುರುದಾರರು ಕಾರಣರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

16. ಆದ್ದರಿಂದ, 1 ಮತ್ತು 2ನೇ ಎದುರುದಾರರು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಹಾಗೂ ವ್ಯವಸ್ಥಾಪಕರೆಂದು ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ ಫಲಾನುಭವಿಯ ಹಿನ್ನಲೆ ಮತ್ತು ಹೊಂದಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾಗಿ ಪರಿಶೀಲಿಸದೆ ಫಲಾನುಭವಿ ನೀಡಿದ ಆದಾಯ ಪ್ರಮಾಣ ಪತ್ರದ ಆಧಾರದ ಮೇರೆಗೆ ನಿಗಮದಿಂದ

ಸಹಾಯಧನ ಮಂಜೂರು ಮಾಡುವ ಕುರಿತು 1ನೇ ಎದುರುದಾರರು ಶಿಫಾರಸ್ಸು ಮಾಡಿದ್ದು, ಸದರಿ ಸಮಯದಲ್ಲಿ 2ನೇ ಎದುರುದಾರರು ಜಿಲ್ಲಾ ವ್ಯವಸ್ಥಾಪಕರ ಹುದ್ದೆಯಲ್ಲಿ ಪ್ರಭಾರ ಹೊಂದಿದ್ದು ಮಂಜೂರಾತಿಗೆ ಅನುಮೋದಿಸಿರುವುದರಿಂದ 1 ಮತ್ತು 2ನೇ ಎದುರುದಾರರ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ.

17. ಈ ಮೇಲ್ಕಾಣಿಸಿದ ಎಲ್ಲ ಅಂಶಗಳಿಂದ 1 ಮತ್ತು 2ನೇ ಎದುರುದಾರರು ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ದಾಖಲೆಗಳಿಂದ ದೃಢಪಡುವುದರಿಂದ ಹಾಗೂ 1 **ಮತ್ತು 2ನೇ ಎದುರುದಾರರಿಂದ ಸರ್ಕಾರಕ್ಕೆ ಉಂಟಾದ ನಷ್ಟವನ್ನು** ಕಾನೂನನ್ವಯ ಮರುಭರಣ ಮಾಡಿಕೊಳ್ಳಲು ಕ್ರಮವನ್ನು ಜರುಗಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ರಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

26/01/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.